(1)

**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಬಿಡಿ.543/2014/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು,ದಿನಾಂಕ: 10.4.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೇವನಹಳ್ಳಿ ತಾಲ್ಲೂಕು ಗಂಗಾವರ ಚೌಡಪ್ಪನಹಳ್ಳಿ ಗ್ರಾಮದ ಸರ್ಕಾರಿ ಸರ್ವೆ ನಂ.51ರಲ್ಲಿ 2 ಎಕರೆ 2 ಗುಂಟೆ, ಸರ್ವೆ ನಂ.132 ಕ್ಷೇತ್ರ 7 ಗುಂಟೆ ಸರ್ವೆ ನಂ.136, 2 ಎಕರೆ 30 ಗುಂಟೆ, ಸ.ನಂ.19 ಕ್ಷೇತ್ರ 6 ಗುಂಟೆ, 166ರಲ್ಲಿ 22 ಎಕರೆ 5 ಗುಂಟೆ, 172 ಕ್ಷೇತ್ರ 1.06 ಎಕರೆ, ಸ.ನಂ.36 2.17 ಎಕರೆ, 33ರಲ್ಲಿ 2.17 ಎಕರೆ ಈ ಜಮೀನುಗಳಲ್ಲಿ ಹಾಗೂ ಇನ್ನೂ ಅನೇಕ ಸರ್ವೆ ನಂಬರುಗಳಲ್ಲಿ ಇರುವ ಪ್ರಸ್ತುತ ಕೆರೆ ಕುಂಟೆಗಳನ್ನು ಹಾಗೆಯೇ ರಕ್ಷಿಸಿ, ಇವುಗಳಿಗೆ ಮಳೆಯಿಂದ ನೀರು ತುಂಬಿದಾಗ ಈ ನೀರನ್ನು ಕೆಲವೇ ವ್ಯಕ್ತಿಗಳು ಅಕ್ರಮವಾಗಿ ಬಳಸಿಕೊಳ್ಳುವುದನ್ನು ತಡೆಗಟ್ಟಲು ಶಾಶ್ವತವಾದ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಕೋರಿ.

*******

ಶ್ರೀ ನಾಗರಾಜು, ಗಂಗಾವರ ಗ್ರಾಮ, ಚನ್ನರಾಯಪಟ್ಟಣ ಹೋಬಳಿ, ದೇವನಹಳ್ಳಿ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ತಿಮ್ಮೇಗೌಡ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗಂಗಾವರ ಗ್ರಾಮ ಪಂಚಾಯತಿ, ದೇವನಹಳ್ಳಿ ತಾಲ್ಲೂಕು, ಮತ್ತು ಇತರ ಮೂವರು ಅಧಿಕಾರಿಗಳ (ಇನ್ನು ಮುಂದೆ 1ರಿಂದ 4ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ದೇವನಹಳ್ಳಿ ತಾಲ್ಲೂಕು ಗಂಗಾವರ ಚೌಡಪ್ಪನಹಳ್ಳಿ ಗ್ರಾಮದ ಸರ್ಕಾರಿ ಸರ್ವೆ ನಂ.51ರಲ್ಲಿ 2 ಎಕರೆ 2 ಗುಂಟೆ, ಸರ್ವೆ ನಂ.132 ಕ್ಷೇತ್ರ 7 ಗುಂಟೆ, ಸರ್ವೆ ನಂ.136ರಲ್ಲಿ 2 ಎಕರೆ 30 ಗುಂಟೆ, ಸ.ನಂ.19 ಕ್ಷೇತ್ರ 6 ಗುಂಟೆ, ಸರ್ವೆ ನಂ.166ರಲ್ಲಿ 22 ಎಕರೆ 5 ಗುಂಟೆ, ಸರ್ವೆ ನಂ.172 ಕ್ಷೇತ್ರ 1.06 ಎಕರೆ, ಸ.ನಂ.36 2.17 ಎಕರೆ, ಸರ್ವೆ ನಂ.33ರಲ್ಲಿ 2.17 ಎಕರೆ, ಈ ಜಮೀನುಗಳಲ್ಲಿ ಹಾಗೂ ಇನ್ನೂ ಅನೇಕ ಸರ್ವೆ ನಂಬರುಗಳಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ, ಗ್ರಾಮದ ಪಶು-ಜಾನುವಾರುಗಳಿಗೆ



Scanned with CamScanner

ನೀರು ಕುಡಿಯಲು ಅನುಕೂಲವಾಗಲೆಂದು ಸರ್ಕಾರದ ವತಿಯಿಂದ ಖರಾಬು ಕುಂಟೆಗಳನ್ನು ತೋಡಿಸಲಾಗಿದ್ದು, ಮಳೆ ಬಂದಾಗ ಇಲ್ಲಿ ನೀರು ತುಂಬಿ ಸುತ್ತಮುತ್ತಲಿರುವ ಗ್ರಾಮದ ಜನ-ಜಾನುವಾರುಗಳಿಗೆ ಅನುಕೂಲವಾಗಿರುತ್ತದೆ. ಆದರೆ ಈ ನೀರನ್ನು ಈರಣ್ಣ ತಂದೆ ಮುನಿವೀರಪ್ಪ ಇವರು ಟ್ರಾಕ್ಟರ್ ಮೂಲಕ ಅಕ್ರಮವಾಗಿ ಸಾಗಿಸಿ ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದಾರೆ. ದ್ಯಾವಪ್ಪ ನವರ ಮಾರಪ್ಪ ಇವರು ಪನ್ನೀರ್ ಕುಂಟೆಯೆಂದು ಕರೆಯುವ, ಉತ್ತನಹಳ್ಳಿ ರಾಮಣ್ಣ ಇವರು ದೊಡ್ಡಬಾವಿಯೆಂದು ಕರೆಯಲ್ಪಡುವ ಕುಂಟೆಯಲ್ಲಿ ಮೋಟಾರ್ ಅಳವಡಿಸಿಕೊಂಡು ಸ್ವಂತ ತೋಟಕ್ಕೆ ನೀರು ಬಿಟ್ಟುಕೊಂಡು ಕುಂಟೆಯನ್ನು ಖಾಲಿಮಾಡಿರುತ್ತಾರೆ. ರಾಮಸ್ವಾಮಿ ಮತ್ತು ಮಧು ಇವರು ಅಕ್ರಮವಾಗಿ ಮೋಟಾರ್ ಮೂಲಕ ಈ ಕುಂಟೆಯಲ್ಲಿಯ ನೀರನ್ನು ತಮ್ಮ ಜಮೀನುಗಳಿಗೆ ಬಿಟ್ಟುಕೊಂಡಿರುತ್ತಾರೆ. ಚಾಕಪ್ಪನವರ ಮುನಿರಾಜು ಅವರು ಕೆರೆ ಅಂಗಳದಲ್ಲಿ ಗಡ್ಡೆ ಮಾಡುವ ಮೂಲಕ ನೀರು ಹಾಯಿಸಿಕೊಂಡು ಸಾರ್ವಜನಿಕರಿಗೆ ತೊಂದರೆ ಮಾಡುತ್ತಿದ್ದಾರೆ. ಈ ಬಗ್ಗೆ ಕ್ರಮಕೈಗೊಳ್ಳುವಂತೆ ಎದುರುದಾರರಿಗೆ ಲಿಖಿತ ದೂರನ್ನು ಸಲ್ಲಿಸಿದರೂ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಆದ್ದರಿಂದ ಈ ಅಕ್ರಮವನ್ನು ತಡೆಗಟ್ಟಿ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

3. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಈ ದೂರಿನ ಮೇರೆಗೆ ಎಲ್ಲಾ ಸಂಬಂಧಿತ ವ್ಯಕ್ತಿಗಳಿಗೆ ನೋಟೀಸು ಜಾರಿಮಾಡಿದ್ದು, ಆ ದಿನವೇ ನೀರು ಪೋಲುಮಾಡುವುದನ್ನು ನಿಲ್ಲಿಸಿರುತ್ತಾರೆ.

4. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿ.6.1.2014ರಂದು ಅಕ್ರಮ ನೀರು ಬಳಸಿಕೊಳ್ಳುವುದನ್ನು ತಡೆಹಿಡಿಯಲು ಆರಕ್ಷಕ ನಿರೀಕ್ಷಕರು ಚನ್ನರಾಯಪಟ್ಟಣ ಅವರಿಗೆ ಪತ್ರ ಬರೆಯಲಾಗಿದ್ದು, ಮತ್ತು ಉಪ ತಹಸೀಲ್ದಾರ್ ಅವರು ಈ ಬಗ್ಗೆ ಕ್ರಮಕೈಗೊಂಡಿರುತ್ತಾರೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

5. 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಈ ಎಲ್ಲಾ ಕೆರೆ ಕುಂಟೆಗಳನ್ನು ಪರಿಶೀಲಿಸಿದ್ದು, ಸ.136ರಲ್ಲಿ 2.30 ಎಕರೆ, ಜಮೀನಿನಲ್ಲಿ ಗ್ರಾಮಪಂಚಾಯತಿ ವತಿಯಿಂದ ನಿವೇಶನ ಹಂಚಿರುವುದಾಗಿ ಸ್ಥಳಪರಿಶೀಲಿಸಿದಾಗ ತಿಳಿದುಬಂದಿರುತ್ತದೆ. ಸ.ನಂ. 16ರಲ್ಲಿ ಕಾಲುಭಾಗ ನೀರು ಸಂಗ್ರಹವಾಗಿದ್ದು, ಕೆರೆ ಏರಿ ಮೇಲೆ ವಿದ್ಯುತ್ ಕೇಬಲ್ ಮತ್ತು ಕೆರೆಯಿಂದ ನೀರಿನ ಪೈಪನ್ನು ಅಳವಡಿಸಲಾಗಿದ್ದು, ಸ್ಥಳಪರಿಶೀಲನೆ ಸಮಯದಲ್ಲಿ ಕಂಡುಬಂದಿರುತ್ತದೆ. ಸ.ನಂ.172ರಲ್ಲಿ ಪ್ರಸ್ತುತ ನೀರನ್ನು ಹಾಯಿಸುತ್ತಿಲ್ಲವೆಂದು

Scanned with CamScanner

(3)

ತಿಳಿದುಬಂದಿರುತ್ತದೆ. ಸ.ನಂ.36 ಮತ್ತು 33ರಲ್ಲಿ ಈಗ ನೀರನ್ನು ಹಾಯಿಸುತ್ತಿಲ್ಲವೆಂದು ಕಂಡುಬಂದಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

6. 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಈ ಕುಂಟೆಗಳಿಗೆ ಅಳವಡಿಸಿದ್ದ ಮೋಟಾರ್ ಪಂಪುಗಳನ್ನು ತೆಗೆದುಹಾಕಿಸಿದ್ದು ಈಗ ನೀರು ಬಳಸಿಕೊಳ್ಳುತ್ತಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

7. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಈಗಾಗಲೇ ದೂರಿನಲ್ಲಿ ನಮೂದಿಸಿರುವ ವ್ಯಕ್ತಿಗಳು ನೀರನ್ನು ಅಕ್ರಮವಾಗಿ ಬಳಸಿಕೊಂಡಿರುತ್ತಾರೆಂದು ತಿಳಿಸಿರುತ್ತಾರೆ.

8. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳು, ಮತ್ತು ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ದೂರಿನಲ್ಲಿ ನಮೂದಿಸಿರುವ ಎಲ್ಲಾ ಜಮೀನುಗಳಲ್ಲಿ ಕೆರೆ ಕುಂಟೆಗಳು ಇವೆ ಎನ್ನುವುದನ್ನು ಎದುರುದಾರರು ಒಪ್ಪಿಕೊಂಡಿರುತ್ತಾರೆ. 3ನೇ ಎದುರುದಾರರು ಫೋಟೋ ಸಹಿತ ಆಕ್ಷೇಪಣೆ ಸಲ್ಲಿಸಿದ್ದು, ಈ ಕುಂಟೆಗಳಲ್ಲಿ ಸ್ವಲ್ಪ ನೀರು ಸಂಗ್ರಹವಿರುವುದು ಕಂಡುಬರುತ್ತದೆ. ಇದೇ ನೀರಿನಿಂದ ಜನ-ಜಾನುವಾರುಗಳಿಗೆ ಅನುಕೂಲವಿದ್ದು, ಆದರೆ ಕೆಲವೇ ವ್ಯಕ್ತಿಗಳು ಈ ನೀರನ್ನು ಅಕ್ರಮವಾಗಿ ಬಳಸಿಕೊಳ್ಳುತ್ತಿರುವುದರಿಂದ ಇದನ್ನು ತಡೆಗಟ್ಟುವುದು ಅತಿ ಅಗತ್ಯವಾಗಿರುತ್ತದೆ. ಎದುರುದಾರರಿಗೆ ಈ ಬಗ್ಗೆ ದೂರು ಬಂದ ಕೂಡಲೇ ಇದನ್ನು ತಾತ್ಕಾಲಿಕವಾಗಿ ತಡೆಗಟ್ಟಿದ್ದಾರೆಂದು ಕಂಡುಬರುತ್ತದೆ. ಆದ್ದರಿಂದ ಎದುರುದಾರರ ವಿರುದ್ಧ ಜರುಗಿಸುವ ಅಗತ್ಯತೆ ಕಂಡುಬರುವುದಿಲ್ಲ.

9. ಆದರೆ, ದೂರಿನಲ್ಲಿ ನಮೂದಿಸಿರುವ ಜಮೀನುಗಳಾದ ದೇವನಹಳ್ಳಿ ತಾಲ್ಲೂಕು ಗಂಗವಾರ ಚೌಡಪ್ಪನಹಳ್ಳಿ ಗ್ರಾಮದ ಸರ್ಕಾರಿ ಸರ್ವೆ ನಂ.51ರಲ್ಲಿ 2 ಎಕರೆ 2 ಗುಂಟೆ, ಸರ್ವೆ ನಂ.132 ಕ್ಷೇತ್ರ 7 ಗುಂಟೆ ಸರ್ವೆ ನಂ.136, 2 ಎಕರೆ 30 ಗುಂಟೆ, ಸ.ನಂ.19 ಕ್ಷೇತ್ರ 6 ಗುಂಟೆ, 166ರಲ್ಲಿ 22 ಎಕರೆ 5 ಗುಂಟೆ, 172 ಕ್ಷೇತ್ರ 1.06 ಎಕರೆ, ಸ.ನಂ.36 2.17 ಎಕರೆ, 33ರಲ್ಲಿ 2.17 ಎಕರೆ ಈ ಜಮೀನುಗಳಲ್ಲಿ ಹಾಗೂ ಇನ್ನೂ ಅನೇಕ ಸರ್ವೆ ನಂಬರುಗಳಲ್ಲಿ ಇರುವ ಪ್ರಸ್ತುತ ಕೆರೆ ಕುಂಟೆಗಳನ್ನು ಹಾಗೆಯೇ ರಕ್ಷಿಸಿ, ಇವುಗಳಿಗೆ ಮಳೆಯಿಂದ ನೀರು ತುಂಬಿದಾಗ ಈ ನೀರನ್ನು ಕೆಲವೇ ವ್ಯಕ್ತಿಗಳು ಅಕ್ರಮವಾಗಿ ಬಳಸಿಕೊಳ್ಳುವುದನ್ನು ತಡೆಗಟ್ಟಲು ಶಾಶ್ವತವಾದ ಕ್ರಮಕೈಗೊಳ್ಳುವುದು ಅವಶ್ಯಕವಾಗಿದೆ.



Scanned with CamScanner

10. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ದೇವನಹಳ್ಳಿ ತಾಲ್ಲೂಕು ಗಂಗಾವರ ಚೌಡಪ್ಪನಹಳ್ಳಿ ಗ್ರಾಮದ ಸರ್ಕಾರಿ ಸರ್ವೆ ನಂ.51ರಲ್ಲಿ 2 ಎಕರೆ 2 ಗುಂಟೆ, ಸರ್ವೆ ನಂ.132 ಕ್ಷೇತ್ರ 7 ಗುಂಟೆ ಸರ್ವೆ ನಂ.136, 2 ಎಕರೆ 30 ಗುಂಟೆ, ಸ.ನಂ.19 ಕ್ಷೇತ್ರ 6 ಗುಂಟೆ, 166ರಲ್ಲಿ 22 ಎಕರೆ 5 ಗುಂಟೆ, 172 ಕ್ಷೇತ್ರ 1.06 ಎಕರೆ, ಸ.ನಂ.36 2.17 ಎಕರೆ, 33ರಲ್ಲಿ 2.17 ಎಕರೆ ಈ ಜಮೀನುಗಳಲ್ಲಿ ಹಾಗೂ ಇನ್ನೂ ಅನೇಕ ಸರ್ವೆ ನಂಬರುಗಳಲ್ಲಿ ಇರುವ ಪ್ರಸ್ತುತ ಕೆರೆ ಕುಂಟೆಗಳನ್ನು ಹಾಗೆಯೇ ರಕ್ಷಿಸಿ, ಇವುಗಳಿಗೆ ಮಳೆಯಿಂದ ನೀರು ತುಂಬಿದಾಗ ಈ ನೀರನ್ನು ಕೆಲವೇ ವ್ಯಕ್ತಿಗಳು ಅಕ್ರಮವಾಗಿ ಬಳಸಿಕೊಳ್ಳುವುದನ್ನು ತಡೆಗಟ್ಟಲು ಶಾಶ್ವತವಾದ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 11/4/17

[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.

Scanned with CamScanner